ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 126-135.**
**©IIMRD, Mysuru.**

IIMRD JOURNALS

**www.iimrd.com**

# ಚಿಕ್ಕಬಳ್ಳಾಪುರದ ಪಾಳೇಪಟ್ಟುಗಳು: ಐತಿಹಾಸಿಕ ಅಧ್ಯಯನ

**ಡಾ. ರಾಧಮ್ಮ ಡಿ. ಕೆ.***

*ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ, ಕೋಲಾರ.

***ಸಾರಾಂಶ: (Abstract)***

*ಚಿಕ್ಕಬಳ್ಳಾಪುರದ ಪರಿಸರ ಪಾಳೇಗಾರರ ಕಾಲಕ್ಕೆ ಮರಸುನಾಡುವಿನ ಒಂದು ಭಾಗವಾಗಿತ್ತು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲೂಕುಗಳು, ಆನೇಕಲ್ ತಾಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ತಾಲೂಕುಗಳು. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟ ತಾಲೂಕುಗಳು. ಕೋಲಾರ ಜಿಲ್ಲೆಯ ಕೋಲಾರ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು. ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು, ಡೆಂಕನಕೋಟೆ ತಾಲೂಕುಗಳು. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿ, ತಂಬಾಳಪಲ್ಲಿ, ಕದಿರಿ ತಾಲೂಕುಗಳಲ್ಲಿ ಮೊರಸೋ ಒಕ್ಕಲಿಗರು ಹೆಚ್ಚಾಗಿ ನೆಲೆಸಿರುವುದರಿಂದ ಈ ಪ್ರದೇಶವನ್ನು ಮರಸುನಾಡು ಎಂದು ಕರೆಯಲಾಗಿದೆ. ಹೀಗಾಗಿ ಮರಸು ಒಕ್ಕಲಿಗರೇ ಚಿಕ್ಕಬಳ್ಳಾಪುರ ಪರಿಸರದಲ್ಲಿ ಗುಮ್ಮನಾಯಕನ ಪಾಳ್ಯವನ್ನು ಬಿಟ್ಟರೆ ಉಳಿದ ವಿವಿಧ ಪಾಳೇಪಟ್ಟುಗಳ ಸಂಸ್ಥಾಪಕರಾಗಿದ್ದಾರೆ.*

***ಮುಖ್ಯಪದಗಳು (Keywords)*** *ಚಿಕ್ಕಬಳ್ಳಾಪುರ, ಐತಿಹಾಸಿಕ, ಪಾಳೇಪಟ್ಟುಗಳು, ನಾಗರಿಕತೆಯ, ಕಾಲಘಟ್ಟ.*

**ಪೀಠಿಕೆ**

ಕೋಲಾರ ಜಿಲ್ಲೆಯ ಒಂದು ಭಾಗವಾಗಿದ್ದ ಚಿಕ್ಕಬಳ್ಳಾಪುರ ಪ್ರಸ್ತುತ ಪ್ರತ್ಯೇಕ ಜಿಲ್ಲೆಯಾಗಿ ರಚಿಸಲ್ಪಟ್ಟಿದೆ. ಚಿಕ್ಕಬಳ್ಳಾಪುರದ ಐತಿಹಾಸಿಕ ಹಿನ್ನೆಲೆಯನ್ನು ಅವಲೋಕಿಸಲ್ಪಟ್ಟಾಗ ನಮಗೆ ಕೆಲವು ಕುತೂಹಲಕಾರಿಯಾದ ಇತಿಹಾಸದ ಪುಟಗಳು ತೆರೆದುಕೊಳ್ಳುತ್ತವೆ. ಇತಿಹಾಸದ ಕಾಲಘಟ್ಟದಿಂದ ತಿಳಿದುಬರುವಂತೆ ದೊಡ್ಡ ದೊಡ್ಡ ಪ್ರಮಾಣದ ಸಾಮ್ರಾಜ್ಯಗಳು ರಾಜ ಮಹಾರಾಜರ ಆಳ್ವಿಕೆಯನ್ನು ನೋಡಬಹುದು. ಇವುಗಳ ನಡುವೆಯೂ ಕೆಲವೊಂದು ಪ್ರಾಂತ್ಯಗಳಲ್ಲಿ ಸಣ್ಣಪುಟ್ಟ ಪಾಳೇಗಾರರು, ಪಾಳೇಪಟ್ಟುಗಳು ಅಸ್ತಿತ್ವಕ್ಕೆ ಬಂದಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಸಂಶೋಧನೆಗೆ ಒಳಪಡಿಸಿದಾಗ ಚಿಕ್ಕಬಳ್ಳಾಪುರದಲ್ಲಿಯೂ ಕೆಲವು ಪಾಳೇಪಟ್ಟುಗಳು ಅಸ್ತಿತ್ವದಲ್ಲಿ ಇದ್ದದ್ದು ಮೂಲಾಧಾರಗಳಿಂದ ತಿಳಿದುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಚಿಕ್ಕಬಳ್ಳಾಪುರದಲ್ಲಿ ಸ್ಥಾಪನೆಯಾದಂತಹ

*Please cite this article as:* ಡಾ. ರಾಧಮ್ಮ, ಡಿ. ಕೆ. (2023). ಚಿಕ್ಕಬಳ್ಳಾಪುರದ ಪಾಳೇಪಟ್ಟುಗಳು: ಐತಿಹಾಸಿಕ ಅಧ್ಯಯನ. ಪ್ರತಿಬಿಂಬ:*ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.126–135.*

ಪಾಳೇಪಟ್ಟುಗಳು ಯಾವ್ಯಾವು? ಅವುಗಳ ಐತಿಹಾಸಿಕ ಹಿನ್ನೆಲೆ, ಅಸ್ತಿತ್ವ ಮತ್ತು ಆಳ್ವಿಕೆಯನ್ನು ಕುರಿತಂತೆ ತಿಳಿಸುವ ಪ್ರಯತ್ನ ಮಾಡಲಾಗಿದೆ..

**ಅಧ್ಯಯನದ ಉದ್ದೇಶ**

- ಸ್ಥಳೀಯ ಇತಿಹಾಸದ ಮೇಲೆ ಬೆಳಕು ಮೂಡಿಸುವುದು.
- ಚಿಕ್ಕಬಳ್ಳಾಪುರವನ್ನು ಆಳ್ವಿಕೆಗೆ ಒಳಪಡಿಸಿಕೊಂಡ ಪಾಳೇಪಟ್ಟುಗಳನ್ನು ಪರಿಚಯಿಸುವುದು.
- ಜನಸಾಮಾನ್ಯರಿಗೆ ಇತಿಹಾಸದ ಬಗ್ಗೆ ತಿಳಿಸುವುದು.

**ಭೌಗೋಳಿಕ ಹಿನ್ನೆಲೆ**

ಉತ್ತಮವಾದ ಪರಿಸರ ಒಂದು ಸಂಸ್ಕೃತಿ, ನಾಗರಿಕತೆಗಳ ಉಗಮಕ್ಕೆ ಕಾರಣವಾಗುತ್ತದೆ. ಹೀಗಾಗಿ ಚಿಕ್ಕಬಳ್ಳಾಪುರದ ಪರಿಸರದಲ್ಲಿ ಉತ್ತಮವಾದ ಪರಿಸರ ಇದ್ದು ಹೆಚ್ಚು ಪಾಳೇಗಾರರು ಮತ್ತು ವಿಭಿನ್ನ ಜನ ಸಮುದಾಯಗಳು ನೆಲೆಸುವಂತಹ, ವೈವಿಧ್ಯಮಯ ಸಂಸ್ಕೃತಿಯನ್ನು ಬೆಳೆಸಲು ಹಾಗೂ ಕನ್ನಡ ನಾಡಿನ ಇತರೆ ಪ್ರದೇಶಗಳಿಗಿಂತ ಉತ್ತಮ ನಾಗರಿಕತೆಯನ್ನು ಹೊಂದಲು ಸಾಧ್ಯವಾಯಿತು. ದಿನಾಂಕ: 23–08–2007ರಂದು 29ನೇ ಜಿಲ್ಲೆಯಾಗಿ ರಚನೆಯಾದ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯು ಕೋಲಾರ ಜಿಲ್ಲೆಯಿಂದ ಪ್ರತ್ಯೇಕವಾಗಿ ಚಿಂತಾಮಣಿ, ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಗೌರಿಬಿದನೂರು ಮತ್ತು ಶಿಡ್ಲಘಟ್ಟ ಎಂಬ ಆರು ತಾಲೂಕುಗಳನ್ನು ಹೊಂದಿದೆ. ಹಾಗೆಯೇ ಶ್ರೀನಿವಾಸಪುರ, ಕೋಲಾರ, ಮುಳಬಾಗಿಲು, ಬಂಗಾರಪೇಟೆ ಮತ್ತು ಮಾಲೂರು ತಾಲೂಕುಗಳು ಕೋಲಾರ ಜಿಲ್ಲೆಯಲ್ಲಿ ಉಳಿದವು. ಈ ಜಿಲ್ಲೆಯಲ್ಲಿ ಬಾಗೇಪಲ್ಲಿ ತಾಲೂಕು ಅತಿ ದೊಡ್ಡ ತಾಲ್ಲೂಕು ಪ್ರದೇಶವಾದರೆ, ಗುಡಿಬಂಡೆ ಅತಿ ಚಿಕ್ಕ ತಾಲ್ಲೂಕು ಪ್ರದೇಶವಾಗಿದೆ.

ಜಿಲ್ಲೆಯ ಪಶ್ಚಿಮ ಭಾಗದಲ್ಲಿ ತುಮಕೂರು ಜಿಲ್ಲೆ, ಉತ್ತರ–ವಾಯುವ್ಯ ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಗಡಿಗಳನ್ನು ಒಳಗೊಂಡಿದೆ. ಹಾಗೆಯೇ ನೈರುತ್ಯ ದಿಕ್ಕಿನಲ್ಲಿ ಕೋಲಾರ ಜಿಲ್ಲೆಯ ಗಡಿಯನ್ನು, ದಕ್ಷಿಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಡಿಯನ್ನು ಹೊಂದಿದೆ. 2011ರ ಜನಗಣತಿ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 4,244 ಚದರ ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ. ಹಾಗೂ 12,55,104 ಜನಸಂಖ್ಯೆಯನ್ನು ಹೊಂದಿದೆ. 894 ಚದರ ಕಿಲೋಮೀಟರ್ ವಿಸ್ತೀರ್ಣದ ಚಿಂತಾಮಣಿ ತಾಲೂಕು, 222.2 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಗುಡಿಬಂಡೆ ತಾಲೂಕು, 874 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಗೌರಿಬಿದನೂರು ತಾಲೂಕು, 932.9 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಬಾಗೇಪಲ್ಲಿ ತಾಲೂಕುಗಳನ್ನು ಕಾಣಬಹುದು. ಇನ್ನು 646.4 ಚದರ ಕಿಲೋಮೀಟರ್ ವಿಸ್ತೀರ್ಣದ ಚಿಕ್ಕಬಳ್ಳಾಪುರ ತಾಲೂಕು, ಮಂಡಿಕಲ್ಲು, ನಂದಿ, ಕಸಬಾ ಎಂಬ ಮೂರು ಹೋಬಳಿಗಳು ಹಾಗೂ 251 ಗ್ರಾಮಗಳನ್ನು ಹೊಂದಿದೆ. ಬೃಹತ್ತಾದ ಬೆಟ್ಟಗಳಿಂದ ಕೂಡಿರುವ ಈ ತಾಲೂಕಿನಲ್ಲಿ ನಂದಿದುರ್ಗ, ಬಿಂಬಗಿರಿ, ಬ್ರಹ್ಮಗಿರಿ, ಚೆನ್ನಕೇಶವ ಬೆಟ್ಟ, ಕಳವರದುರ್ಗ, ಹರಿಹರೇಶ್ವರ ಬೆಟ್ಟ ಮುಂತಾದ ಬೆಟ್ಟದ ಶ್ರೇಣಿಗಳು ಇವೆ. ಇಂತಹ ಭೌಗೋಳಿಕವಾದ ಬೆಟ್ಟದ ಶ್ರೇಣಿಗಳು ಪಾಳೇಗಾರರ ಕಾಲದಲ್ಲಿ ಕೋಟೆಗಳ ಮೇರೆಗಳಾಗಿ, ಜಿಲ್ಲೆಯ ವಾಯುಗುಣ ನಿಯಂತ್ರಣ ಕೇಂದ್ರಗಳಾಗಿ, ಪ್ರವಾಸಿ ಕೇಂದ್ರಗಳಾಗಿ ಹೆಚ್ಚು

ಮನ್ನಣೆಯನ್ನು ಪಡೆಯುವಂತಾಯಿತು. ಉತ್ತರ–ದಕ್ಷಿಣವಾಗಿ ಹರಡಿರುವ ನಂದಿಬೆಟ್ಟದ ಶ್ರೇಣಿಯಲ್ಲಿ ಹುಟ್ಟಿ ಹರಿಯುವ ಪಾಪಾಗ್ನಿ ನದಿ ಹಾಗೂ ದಕ್ಷಿಣ ಪಿನಾಕಿನಿ ನದಿಗಳು ಕೆರೆಕಟ್ಟೆಗಳನ್ನು ತುಂಬಿಸಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿವೆ.

**ಐತಿಹಾಸಿಕ ಹಿನ್ನೆಲೆ**

ಪ್ರಾಚೀನ ಕಾಲದಲ್ಲಿ ಚಿಕ್ಕಬಳ್ಳಾಪುರವನ್ನು ನಾಗವಂಶಿಯರು ಆಳುತ್ತಿದ್ದರು ಎಂದು ಕ್ರಿ.ಶ.130ರಲ್ಲಿ ಗ್ರೀಕ್ ಭೂಗೋಳ ಶಾಸ್ತ್ರಜ್ಞ ಟಾಲೆಮಿಯ ಸಂಶೋಧನಾ ಗ್ರಂಥಗಳಿಂದ ತಿಳಿಯಲಾಗಿದೆ. ಶಾತವಾಹನರು, ಪಲ್ಲವರು, ಚೋಳರು, ಬಾಣರೊಡನೆ ರಾಜಕೀಯ ಹಾಗೂ ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಈಜೋವೆನ್ ದೂರವೆಲ್ ರವರ ಸಂಶೋಧನೆಯ "ಹಿಸ್ಟರಿ ಆಫ್ ಡೆಕಾನ್" ಎಂಬ ಸಂಶೋಧನಾ ಕೃತಿಯಲ್ಲಿಯೂ ಈ ವಿಚಾರವನ್ನು ವಿವರಿಸಲಾಗಿದೆ. ಚಿಕ್ಕಬಳ್ಳಾಪುರ ಸಮೀಪದಲ್ಲಿ ಚಿಕ್ಕನಾಗಲು, ದೊಡ್ಡನಾಗಲು, ಮಂಡಿಕಲ್ಲು ಎಂಬ ಗ್ರಾಮಗಳು ಮತ್ತು ನಂದಿ ಪರ್ವತ ಶ್ರೇಣಿಗಳು ನಾಗವಂಶಿಯರ ಕುರುಹುಗಳಾಗಿವೆ.

ಚಿಕ್ಕಬಳ್ಳಾಪುರ ಪರಿಸರವನ್ನು ಐತಿಹಾಸಿಕವಾಗಿ ಗಮನಿಸಿದಾಗ ಪ್ರಾಚೀನ ಕಾಲದಿಂದಲೂ ಇಲ್ಲಿ ಬಾಣರು ನೊಳಂಬರು, ಗಂಗರು, ರಾಷ್ಟ್ರಕೂಟರು, ಪಲ್ಲವರು, ಚೋಳರು, ಹೊಯ್ಸಳರ ರಾಜ ಮಹಾರಾಜರು ಪಾಳೇಗಾರರ ಆಳ್ವಿಕೆಯ ಮೊದಲೇ ಆಡಳಿತ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ ನೀಲಗಿರಿ ಚೋಳಮಂಡಲ, ಇರಟ್ಟಪಾಡಿ ಚೋಳಮಂಡಲ, ಜಯಗೊಂಡ ಚೋಳಮಂಡಲ, ವಿಕ್ರಮಾಚೋಳಮಂಡಲ, ಹುಲಿನಾಡು ನಂದಿಮಂಡಲ, ಕಳವಾರಸೀಮೆ, ಬುರುಡುಗುಂಟ ಸೀಮೆ, ಸಾಧಲಿ ನಾಡು ಮೊದಲಾದವು ಅವರ ಪ್ರಾಚೀನ ಆಡಳಿತದ ಘಟಕಗಳನ್ನು ಕಾಲಕಾಲಕ್ಕೆ ರಚಿಸಿಕೊಂಡಿದ್ದನ್ನು ಕಾಣಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ನಂದಿಮಂಡಲವು ಪ್ರಸಿದ್ಧವಾದ ಆಡಳಿತ ಘಟಕವಾಗಿದ್ದು ಅದರ ವ್ಯಾಪ್ತಿ ಸುಮಾರು 40 ಕಿಲೋಮೀಟರ್‌ಗೂ ಹೆಚ್ಚು ವಿಸ್ತಾರಗೊಂಡಿತ್ತು. ಅಲ್ಲದೆ ಈ ಪರಿಸರದಲ್ಲಿ ಈಡಿಗ, ಕುಂಬಾರ, ಕೊಂಡಮಾಮ, ಕೊರಮ, ಗಾಣಿಗ, ಗೊಲ್ಲ, ಚೆನ್ನ, ದಾಸ, ತಿಗಳ, ಒಕ್ಕಲಿಗ, ದರ್ಜಿ, ನಾಗರ್ಥ, ನಟುವ, ನಾಯಕ, ನಾಯಿಂದ, ನೇಕಾರ, ಬಣಜಿಗ, ಬೆಸ್ತ, ಬೋವಿ, ಮರಾಠ, ತೆಲುಗು, ಉಪ್ಪಾರರು, ಒಡ್ಡರು, ಜೋಗಿಗಳು, ತೊಗಡಿಗರು, ಮರಸು ಒಕ್ಕಲಿಗರು, ಅಗಸರು, ಹೊಲೆಯರು, ಮಾದಿಗ ಮೊದಲಾದ ಜಾತಿ ವರ್ಗದವರು ನೆಲೆಸಿರುವುದು ಕಂಡುಬರುತ್ತದೆ.

ಐತಿಹಾಸಿಕವಾಗಿ ಗಮನಿಸಿದಾಗ ಈ ಕಾಲವನ್ನು ಸ್ಥಿತ್ಯಂತರ ಕಾಲಘಟ್ಟ ಎನ್ನಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಕ್ರಿ.ಶ.13 ಮತ್ತು 15ನೇ ಶತಮಾನದಲ್ಲಿ ಪಾಳೇಗಾರಿಕೆಯ ಪಟ್ಟುಗಳು ಅಸ್ತಿತ್ವಕ್ಕೆ ಬರುತ್ತದೆ. ಹಳೆಯ ಬೃಹತ್ ಸಾಮ್ರಾಜ್ಯಗಳು ಹಲವು ರಾಜಕೀಯ ಶಕ್ತಿಗಳು ಉದಯಿಸಿದವು. ಇದಕ್ಕೆ ಆಂತರಿಕ ಕಾರಣಗಳೊಂದಿಗೆ ಬಾಹ್ಯ ಕಾರಣಗಳು ಇವೆ. ಸಾಂಪ್ರದಾಯಿಕ ಧರ್ಮಗಳು ಮತ್ತು ರಾಜ ಧರ್ಮವನ್ನು ಎತ್ತಿ ಹಿಡಿಯುವುದು ರಾಜಮನೆತನಗಳ ಜವಾಬ್ದಾರಿಯಾಗಿದೆ. ಯುದ್ಧದಲ್ಲಿ ಸೋತಾಗ ಶರಣಾಗತರಾಗಿ ಕಪ್ಪ ಕಾಣಿಕೆಗಳನ್ನು ಸಲ್ಲಿಸಿದರೆ ಅಂತಹವರನ್ನು ಮನ್ನಿಸಿ ಅವರಿಗೆ ರಾಜ್ಯವನ್ನು ಹಿಂತಿರುಗಿಸುವುದು ದಕ್ಷಿಣ ಭಾರತದ ರಾಜಮನೆತನಗಳ ವಿಶೇಷ ನೀತಿಯಾಗಿತ್ತು. ಅಲ್ಲದೆ ರಾಜ ಪರಂಪರೆಯುಳ್ಳ ದಂಡನಾಯಕರು ಮಹಾಪ್ರಧಾನರು ಸಾಕಷ್ಟು ಅಧಿಕಾರಗಳನ್ನು ಹೊಂದಿದ್ದರು. ಪ್ರಾಂತ್ಯಾಧಿಕಾರಿಗಳು ಅಥವಾ ಸುಬೇದಾರರು

ಸಾಮ್ರಾಟನಿಗೆ ಯುದ್ಧಕಾಲದಲ್ಲಿ ಸೈನ್ಯವನ್ನು ಸಹ ಪೂರೈಸುವ ಮತ್ತು ಶಾಂತಿಕಾಲದಲ್ಲಿ ದನಕನಕಾದಿ, ದವಸ–ಧಾನ್ಯಗಳನ್ನು ಇತರೆ ಸಂಪನ್ಮೂಲಗಳನ್ನು ಪೂರೈಸುವ ಮಧ್ಯವರ್ತಿಗಳಾಗಿ ಪರಿಣಮಿಸಿದ್ದರು. ಅವರ ಬಗ್ಗೆ ಜನರು ಮೆಚ್ಚುಗೆಯನ್ನಾಗಿ, ತಿರಸ್ಕಾರವನ್ನಾಗಲಿ ವ್ಯಕ್ತಪಡಿಸಲು ಆಗದಷ್ಟು ಅಸಹಾಯಕರಾಗಿದ್ದರು. ಸೈನ್ಯ ಮತ್ತು ಕಟ್ಟುಪಾಡುಗಳೆ ಮುಖ್ಯ ಪಾತ್ರ ವಹಿಸಿದ್ದವು. ಪ್ರಬಲವಾದ ಸುಬೇದಾರ ತನ್ನ ಅಧಿಪತಿಯ ವಿರುದ್ಧ ದಂಗೆ ಹೇಳುವುದು ಸಾಮಾನ್ಯ ಸ್ಥಿತಿಯಾಗಿತ್ತು.

ಉತ್ತರ ಭಾರತದಲ್ಲಿ ದೆಹಲಿಯ ಸುಲ್ತಾನರು ದೇವಗಿರಿಯ ಯಾದವರನ್ನು, ವಾರಂಗಲ್‌ನ ಕಾಕತ್ತಿಯರನ್ನು, ಕಂಪಿಲೆಯ ಮನೆತನವನ್ನು, ಹೊಯ್ಸಳರನ್ನು ನಿರ್ಧಾಕ್ಷಿಣ್ಯವಾಗಿ ನಿರ್ಮೂಲನೆ ಮಾಡಿತ್ತು. ಆದರೆ ಮಹಮ್ಮದ್ ಬಿನ್ ತೊಘಲಕ್‌ನ ಅಸಮರ್ಥತೆಯ ಆಳ್ವಿಕೆಯಿಂದಾಗಿ ಪ್ರಾಂತ್ಯಾಧಿಕಾರಿಗಳು ಅಥವಾ ಕೆಲವು ಸುಬೇದಾರರು ಸ್ವತಂತ್ರವಾಗಿ ಆಳ್ವಿಕೆ ನಡೆಸುವಂತಹ ಸಂದರ್ಭಗಳು ಒದಗಿತು. ಇದೇ ಪರಿಸ್ಥಿತಿ ಭಾರತೀಯ ರಾಜಕೀಯ ಚಿತ್ರಣವನ್ನು ಬದಲಾಯಿಸಿತು. ಇದೇ ದೆಸೆಯಲ್ಲಿ ನಿರ್ಮಾಣವಾದ ವಿಜಯನಗರ ಸಾಮ್ರಾಜ್ಯ ತನ್ನ ಛಾಯೆಯನ್ನು ಇಡೀ ದಕ್ಷಿಣ ಭಾರತದಾದ್ಯಂತ ವಿಸ್ತರಿಸಿತು. ಸಮಸ್ಯೆಗಳಿಂದ ಮುಕ್ತವಾಗಲಿಲ್ಲ ದೆಹಲಿ ಮತ್ತು ಬಹಮನಿ ಸುಲ್ತಾನರ ವಿರುದ್ಧ ನಿರಂತರವಾದ ಶತ್ರುತ್ವವನ್ನು ಎದುರಿಸಬೇಕಾಯಿತು. ಇದರಿಂದ ವಿಜಯನಗರದ ಅರಸರಿಗೆ ಬೇಕಾದ ಸೈನ್ಯ ಮತ್ತು ಹಣ ಎರಡನ್ನು ಯಾರು ಪೂರೈಸುತ್ತಾರೋ ಅವರಿಗೆ ಅಲ್ಲಲ್ಲಿ ಜಹಾಂಗೀರ್‌ಗಳಂತೆ ಪ್ರಾಂತ್ಯಗಳನ್ನು ಹಂಚುತ್ತಿದ್ದರು. ಇಂತಹ ಅವಕಾಶವನ್ನು ಬಳಸಿಕೊಂಡ ಹಾವತಿ ನಾಡಪ್ರಭು ರಣಭೈರೇಗೌಡನ ವಂಶಸ್ಥರು ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಕೋಲಾರ, ಕೊರಟಗೆರೆ ಮಧುಗಿರಿ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ನೆಲೆಸಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ವಿಜಯನಗರ ಚಕ್ರವರ್ತಿಗಳಿಗೆ ಯಾವುದೇ ಸಾಮಂತರು ಬಲಶಾಲಿಗಳಾಗಿ ಬೆಳೆಯುವುದು ಬೇಕಿರಲಿಲ್ಲ. ಹಾಗಾಗಿ ಅವರು ಸಣ್ಣ–ಪುಟ್ಟ ಪಾಳೇಪಟ್ಟುಗಳಿಗೆಲ್ಲ ಮಾನ್ಯತೆ ಕೊಡುತ್ತಾ ಹೋದರು. ಇದರಿಂದ ತಮ್ಮ ಪ್ರಾಂತ್ಯ ಅಧಿಕಾರಗಳ ಮೂಲಕ ಈ ತುಂಡರಸರಗಳ ಮೇಲೆ ಹಿಡಿತ ಸಾಧಿಸುವುದು ಅವರಿಗೆ ಸುಲಭವಾಯಿತು. 1565ರಲ್ಲಿ ವಿಜಯನಗರ ಸಾಮ್ರಾಜ್ಯ ಯುದ್ಧದಿಂದ ತತ್ತರಿಸಿದರು ಇಂತಹ ನೀತಿಯನ್ನೇ ಅವರು ಅನುಸರಿಸಿದರು. ಇದರಿಂದಾಗಿ ಪಾಳೇಗಾರರು ತಮ್ಮ ಪ್ರಭುತ್ವವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗದೆ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾಗಿದ್ದುಕೊಂಡೆ ಸಾಧ್ಯವಾದಷ್ಟು ಪ್ರಾಂತ್ಯ ವಿಸ್ತಾರ ನೀತಿಯನ್ನು ಅನುಸರಿಸಿದರು. ಆದರೆ ವಿಜಯನಗರ ಸಾಮ್ರಾಜ್ಯದ ಅವನತಿಯತ್ತ ಸಾಗುತ್ತಿದ್ದಾಗ ಪಾಳೇಗಾರರಿಗೆ ಒಂದೆಡೆ ಆತಂಕ ಮತ್ತೊಂದು ಕಡೆ ತಮ್ಮ ತಮ್ಮ ಪ್ರಭುತ್ವಗಳ ವಿಸ್ತರಣೆಗೆ ಅನುಕೂಲವಾಗುತ್ತಾ ಎಂಬ ಊಹೆ. ಹೀಗಾಗಿ ಬಹುಮನಿ ಸುಲ್ತಾನರು, ಮೈಸೂರಿನ ಒಡೆಯರು, ಹೈದರಾಲಿ, ಟಿಪ್ಪು ಸುಲ್ತಾನ್, ಮರಾಠರು, ನಿಜಾಮರು ಹಾಗೂ ದೆಹಲಿ ಪ್ರಭುತ್ವಗಳ ಆಕ್ರಮಣ ರಾಜಕೀಯ ನೀತಿ ಅಡಿಯಲ್ಲಿ ಸಹಜವಾಗಿಯೇ ಸ್ಪರ್ಧೆ ಉಂಟಾಯಿತು.

ಚಿಕ್ಕಬಳ್ಳಾಪುರದ ಪರಿಸರ ಪಾಳೇಗಾರರ ಕಾಲಕ್ಕೆ ಮರಸುನಾಡುವಿನ ಒಂದು ಭಾಗವಾಗಿತ್ತು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲೂಕುಗಳು, ಆನೇಕಲ್ ತಾಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ

ತಾಲೂಕುಗಳು. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟ ತಾಲೂಕುಗಳು. ಕೋಲಾರ ಜಿಲ್ಲೆಯ ಕೋಲಾರ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು. ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು, ಡೆಂಕನಕೋಟೆ ತಾಲೂಕುಗಳು. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿ, ತಂಬಾಳಪಲ್ಲಿ, ಕದಿರಿ ತಾಲೂಕುಗಳಲ್ಲಿ ಮೊರಸೋ ಒಕ್ಕಲಿಗರು ಹೆಚ್ಚಾಗಿ ನೆಲೆಸಿರುವುದರಿಂದ ಈ ಪ್ರದೇಶವನ್ನು ಮರಸುನಾಡು ಎಂದು ಕರೆಯಲಾಗಿದೆ. ಹೀಗಾಗಿ ಮರುಸು ಒಕ್ಕಲಿಗರೇ ಚಿಕ್ಕಬಳ್ಳಾಪುರ ಪರಿಸರದಲ್ಲಿ ಗುಮ್ಮನಾಯಕನಪಾಳ್ಯವನ್ನು ಬಿಟ್ಟರೆ ಉಳಿದ ವಿವಿಧ ಪಾಳೇಪಟ್ಟುಗಳ ಸಂಸ್ಥಾಪಕರಾಗಿದ್ದಾರೆ.

ವಿಜಯನಗರ ಸಾಮ್ರಾಜ್ಯ ಹುಟ್ಟುವ ಮೊದಲೇ ಅಸ್ತಿತ್ವಕ್ಕೆ ಬಂದಿದ್ದ ಪಾಳೇಯಗಾರರಾದ ಗುಮ್ಮನಾಯಕನ ಪಾಳ್ಯವೂ ಕ್ರಿ.ಶ.1243ರಲ್ಲಿ ಕಡಪ ಜಿಲ್ಲೆಯ ದೊಡ್ಡಪಾಳ್ಯದ ನರಸಿಂಹನಾಯಕ ಮತ್ತು ಖಾದ್ರಿಪತಿ ನಾಯಕ ಎಂಬ ಸಹೋದರರಿಂದ ಸ್ಥಾಪನೆಗೊಂಡಿತ್ತು. ಇವರು ವೇಕರಿ ಮನೆತನದವರು, ಅಚ್ಯುತ ಗೋತ್ರದ ಹಾಲು ವ್ಯಾಕರ ಕ್ಷತ್ರಿಯರು, ಕದ್ರಿ ನರಸಿಂಹಸ್ವಾಮಿ ಇವರ ಮನೆದೇವರು. ಅಂದು ಹೊಯ್ಸಳರ ರಾಜ್ಯವನ್ನು ಮುಮ್ಮಡಿ ನರಸಿಂಹನು ಆಡಳಿತ ಮಾಡುತ್ತಿದ್ದರೆ, ದೆಹಲಿಯಲ್ಲಿ ಬಹಮನ್ ಷಾನ ನಂತರ ಅಲ್ಲವುದ್ದೀನ್‌ನ ಮಸೂದನ ಆಡಳಿತ ಮುಂದುವರಿದಿತ್ತು. ಚಿಕ್ಕಬಳ್ಳಾಪುರದ ಪರಿಸರದಲ್ಲಿ ಹೇಳಿಕೊಳ್ಳುವಷ್ಟು ಯಾವ ರಾಜಕೀಯ ಶಕ್ತಿಗಳು ಇರಲಿಲ್ಲ. ಆದರೂ ಭೂಮಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಹೆಚ್ಚಾಗಿದ್ದು ಜನವಸತಿಗೆ ಅನುಕೂಲಕರವಾಗಿತ್ತು.

ಹಲವು ಬುಡಕಟ್ಟಿನವರಲ್ಲಿ ರಾಜಕೀಯ ಪ್ರಭುತ್ವದ ಕೊರತೆ ಇತ್ತು ಹೀಗಾಗಿ ಅವರು ಬಾಹ್ಯ ರಾಜಕೀಯ ಶಕ್ತಿಗೆ ಅತಿ ಬೇಗನೆ ಹೊಂದಿಕೊಳ್ಳುತ್ತಿದ್ದರು ಪ್ರಾಚೀನ ಆಡಳಿತ ಘಟಕಗಳು ಅವಸಾನದ ಅಂಚಿನಲ್ಲಿದ್ದವು ಹೀಗಾಗಿ ರಾಜ್ಯ ಕಟ್ಟುವ ಹಂಬಲವಿದ್ದವರಿಗೆ ಇದು ಸುಸಂದರ್ಭವಾಗಿತ್ತು. ಬಹುಶಃ ಇದೆ ಉದ್ದೇಶಕ್ಕಾಗಿ ನರಸಿಂಹನಾಯಕ ಮತ್ತು ಅವನ ಸಹೋದರ ಖಾದ್ರಿಪತಿ ನಾಯಕರು ತಮ್ಮ ಬೆಂಬಲಿಗರೊಂದಿಗೆ ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿಗೆ ಪ್ರಯಾಣಿಸಿ ಯಾದವ ಕೋಟೆಗೆ ತಲುಪಿ ಅಲ್ಲೇ ನೆಲೆಸಿದರು. ಈಗಿನ ಬಾಗೇಪಲ್ಲಿಯ ಸಮೀಪವಿರುವ ಪಾತಪಾಳ್ಯಗೆ ಬಂದು ನೆಲೆಗೊಂಡರು. ಇಲ್ಲಿನ ಶ್ರೀಮಂತರಾಗಿದ್ದ ಗುಮ್ಮರೆಡ್ಡಿ ನೆರವು ಪಡೆದು ಅಲ್ಲಿನ ಭೈರವ ಬೆಟ್ಟಗಳಲ್ಲಿ ತಮ್ಮ ಅದಿಪತ್ಯವನ್ನು, ಸ್ವತಂತ್ರ ಆಳ್ವಿಕೆಯನ್ನು ಸ್ಥಾಪಿಸಿದರು. ಹೀಗೆ ಸುತ್ತಮುತ್ತಲಿನ ಕಾಡಿನ ಹಾದಿಯನ್ನು ಸುಗಮಗೊಳಿಸಿ ದನ–ಕರುಗಳನ್ನು, ಗ್ರಾಮಸ್ಥರನ್ನು ರಕ್ಷಣೆ ಮಾಡುವುದರ ಮೂಲಕ ಜನಪ್ರಿಯರಾದರು. ದೇವರಾಜಪಲ್ಲಿ, ಬಾಲರೆಡ್ಡಿಪಲ್ಲಿ, ಪೆನುಮಲೆ, ಸದ್ದು ಪಾಳ್ಯ, ರೈಮಕ್ಕಪಲ್ಲಿ, ಮಕಿರೆಡ್ಡಿಪಲ್ಲಿ, ಸರವಲಪಲ್ಲಿ ಎಂಬ ಹೊಸ ಗ್ರಾಮಗಳನ್ನು ನಿರ್ಮಿಸಿದರು.

ಕ್ರಿ.ಶ.1272ರಲ್ಲಿ ಖಾದ್ರಿಪತಿ ನಾಯಕನ ಮಗನಾದ ಚಿನ್ನಮನಾಯಕನು ಕಲ್ಯಾಣದುರ್ಗವನ್ನು ನಿರ್ಮಿಸಿ ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅವನ ಸಮಕಾಲೀನಾಗಿದ್ದ ಯರಮಜ್ಜ ಪೆಮ್ಮನಾಯಕ ಎಂಬ ದುಷ್ಟ ಪಾಳೇಗಾರನನ್ನು ಸೋಲಿಸಿ ಗುಟ್ಟಪಾಳ್ಯ, ಮಧ್ಯಪಲ್ಲಿ ಮುಂತಾದ ಹಳ್ಳಿಗಳನ್ನು ವಶಪಡಿಸಿಕೊಂಡನು. ಬಹುಶಃ ಇಲ್ಲಿಂದಲೇ ಈ ಪಾಳೇಪಟ್ಟಿಗೆ ಸುತ್ತಮುತ್ತಲಿನ ಪಾಳೇಗಾರರ ವಿರೋಧ ಉಂಟಾಯಿತೆನ್ನಬಹುದು. ನಂತರ ಇವನ ಮಗನಾದ ಲಕ್ಕನಾಯಕನು 1314ರಿಂದ 1346ರವರೆಗೆ ಆಡಳಿತ

ನಡೆಸಿದ. ಇವನ ಅವಧಿಯಲ್ಲಿ ವಡಗೆರೆ, ಓಲಾನಾಯಕನಹಳ್ಳಿ, ಮಿಟ್ಟೆಮೀರಿ, ತಿಮ್ಮಸಂದ್ರ ಹಾಗೂ ಎಲ್ಲಂಪಲ್ಲಿ ಎಂಬ ಹಳ್ಳಿಗಳು ನಿರ್ಮಾಣವಾದವು. ಇವನು ಪ್ರತಿ ವರ್ಷ ವಿಜಯನಗರ ಸಾಮ್ರಾಜ್ಯಕ್ಕೆ ಐದು ಸಹಸ್ರ ವರಹ ಸುವರ್ಣದಾಯ ಪಗೋದಿಯಾಗಿ ಕೊಡುತ್ತಿದ್ದನು. ಅಂದರೆ ಸುಮಾರು 12 ತಲೆಮಾರಿನವರು 560 ವರ್ಷಗಳ ಕಾಲ ಆಡಳಿತ ಮಾಡಿದ್ದಾರೆ. 23 ಗ್ರಾಮಗಳನ್ನು ಸುವ್ಯಸ್ತವಾಗಿ ನಿರ್ಮಾಣ ಮಾಡಿದ ಪ್ರಖ್ಯಾತಿ ಈ ಪಾಳೇಪಟ್ಟಿಗಿದೆ.

ದಕ್ಷಿಣ ಭಾಗದಲ್ಲಿ ಆವತಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ, ಯಲಹಂಕ ಹಾಗೂ ಸುಗಟೂರುಗಳಲ್ಲಿ ಮರಸು ಒಕ್ಕಲಿಗರ ಪಾಳೇಪಟ್ಟುಗಳು ಅಸ್ತಿತ್ವಕ್ಕೆ ಬಂದವು. ಇವು ಬೊಮ್ಮನಾಯಕನಹಳ್ಳಿಗೆ ಉತ್ತಮ ಸಂಬಂಧ ಹೊಂದಿರಲಿಲ್ಲ. ಗುಮ್ಮನಾಯಕನ ಆನೆಗುಂದಿ ಅರಸನಾಗಿದ್ದ ತಿರುಮಲರಾಯರಿಗೆ ಕಪ್ಪ ಕಾಣಿಕೆಗಳನ್ನು ಕೊಡುತ್ತಿದ್ದನು. ಅಲ್ಲಿಂದಲೇ ಈ ಪಾಳೇಗಾರರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಅವರ ಎಲ್ಲಾ ಯಶಸ್ಸಿನಲ್ಲೂ ಪಾಲುದಾರರಾಗಿದ್ದರು. ಅದರಲ್ಲೂ ವಿಶೇಷವಾಗಿ ಬಹುಮನಿ ಸುಲ್ತಾನರೊಂದಿಗೆ ನಡೆದಂತಹ ಎಲ್ಲಾ ಯುದ್ಧಗಳಿಗೆ ಸೈನಿಕ ಬೆಂಬಲದೊಂದಿಗೆ ಅವರ ಹೋರಾಟಗಳಿಗೆ ಬೆನ್ನೆಲುಬಾಗಿ ದುಡಿದರು. ಅವರ ಪತನದ ನಂತರವೂ ಸ್ವತಂತ್ರವಾದ ಅಸ್ತಿತ್ವಕ್ಕಾಗಿ ಮರಾಠರು, ಮೈಸೂರು ರಾಜ್ಯ, ಮೊಘಲರು ಹಾಗೂ ನಿಜಾಮರೊಂದಿಗೆ ಹೋರಾಡಿದರು. ಅಲ್ಲದೆ ಬ್ರಿಟಿಷರ ರಾಜಕೀಯ ಪ್ರಭುತ್ವದೊಂದಿಗೆ ತಮ್ಮ ಅಸ್ತಿತ್ವವನ್ನು ಕೊನೆಗೊಳಿಸಿಕೊಂಡರು.

ಆವತಿ ರಣಭೈರೇಗೌಡ ಚಿಕ್ಕಬಳ್ಳಾಪುರದ ಪಾಳೇಗಾರರ ಮೂಲ ಸಂಸ್ಥಾಪಕ. ಇವನು ಮೂಲತಃ ತಮಿಳುನಾಡಿನ ಪುತ್ತೂರಿನವನು. ಇವನ ವಂಶದವರು ಗಂಗಾ ದೊರೆಗಳ ಅಧಿಕಾರಿಗಳಾಗಿದ್ದರು. ಪುತ್ತೂರು ಯಾಕಿಲ್ಲ ರಾಜ್ಯಕ್ಕೆ ಸೇರಿದ ಗ್ರಾಮವಾಗಿತ್ತು. ಆ ದಿನ ಪಾಳೇಗಾರ ಬೇಡ ಜನಾಂಗದ ಕ್ರೂರಿಯಾದ ಸೆಲ್ವನಾಯಕ. ಇವನು ಒಕ್ಕಲಿಗನಾದ ರಣಭೈರೇಗೌಡನ ಮಗಳನ್ನು ವಿವಾಹವಾಗಲು ಬಯಸಿದನು. ಕ್ರಿ.ಶ 1414ರಲ್ಲಿ ಇವನ ಕಿರುಕುಳಕ್ಕೆ ತಾಳಲಾರದೆ ತನ್ನ ಪತ್ನಿ ಕೆಂಪಮ್ಮ ಆರು ಜನ ಸಹೋದರರು ಹಾಗೂ ಮೂರು ಮಕ್ಕಳೊಂದಿಗೆ ವಲಸೆ ಹೋಗಿ ದೇವನಹಳ್ಳಿಯ ಸಮೀಪದಲ್ಲಿರುವ ಗೌತಮಗಿರಿ ಮತ್ತು ನಂದಿಗಿರಿಗಳ ತಪ್ಪಲಲ್ಲಿ ನೆಲೆಸಿದ. ಮೂಲತಃ ಕೃಷಿಕರಾದ ಇವರಿಗೆ ಇಲ್ಲಿನ ಫಲವತ್ತಾದ ಭೂಮಿ, ನದಿ ಮುಖಜಭೂಮಿ, ಉತ್ತಮವಾದ ಕಾಡು, ಗಿರಿ–ಕಂದರಗಳು ತುಂಬಾ ಆಕರ್ಷಿತವಾದವು ಮತ್ತು ಈಗಾಗಲೇ ನಿರ್ಮಾಣಗೊಂಡಿರುವ ಗ್ರಾಮಗಳಲ್ಲಿರುವ ಸಹೋದರತ್ವದ ಮನೋಭಾವನೆ ಹೊಂದಿರುವ ಜನರ ಪ್ರೀತಿ–ವಿಶ್ವಾಸಗಳು ಅವರಲ್ಲಿ ಹೊಸ ಜೀವನದೊಂದಿಗೆ ರಾಜಕೀಯ ಪ್ರಭುತ್ವ ಹೊಂದುವ ಆಕಾಂಕ್ಷೆಯನ್ನು ಪ್ರೇರೇಪಿಸಿದವು.

ಚೆಲುವನಾಯಕನ ಮೇಲೆ ಸೇಡು ತೀರಿಸಿಕೊಳ್ಳಲು ಸಜ್ಜಾದರು. ಇದಕ್ಕಾಗಿ ಆವತಿ ಗ್ರಾಮವನ್ನು ನಿರ್ಮಿಸಿದರು. ಗರ್ಭವತಿಯಾಗಿದ್ದ ಕೆಂಪಮ್ಮ ಗಂಡು ಮಗುವಿಗೆ ಜನ್ಮ ನೀಡಿದಳು. ಆ ಮಗುವೆ ಮಲ್ಲಭೈರೇಗೌಡ. ಉತ್ತರ ಭಾರತದಲ್ಲಿ ಆಡಳಿತ ಅಂತ್ಯವಾಗಿ ತೊಘಲಕ್ ಸಂತತಿಯ ಆಳ್ವಿಕೆ ಮುಂದುವರೆದಿತ್ತು. ಇನ್ನು ವಿಜಯನಗರ ಸಾಮ್ರಾಜ್ಯವು ಎರಡನೇ ದೇವರಾಯನ ನಾಯಕತ್ವದಲ್ಲಿ ಪ್ರಬಲಗೊಳ್ಳುತ್ತಿತ್ತು. ಹಳ್ಳಿಗಳು ಸಹ ಅದುವೇ ನಮ್ಮ ರಾಜ್ಯವೆಂದು ಪರಿಗಣಿಸಿ ಅದಕ್ಕೆ ಗೌರವದನಗಳನ್ನು ಕೊಡುತ್ತಿದ್ದರು. ಜನಸಮುದಾಯಗಳನ್ನು ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು ಯಾರು ಕಾಯುತ್ತಾರೋ

ಅವರಿಗೆ ಮಾನ್ಯತೆ ನೀಡುವ ನೀತಿ ಅಂದು ಪ್ರಚಲಿತದಲ್ಲಿತ್ತು. ಹೀಗಾಗಿ ಕೃಷಿಕರು, ಶ್ರೀಮಂತರು ಹಾಗೂ ಹೋರಾಟದ ಗುಣ, ದೈವಿಕರಾದ ರಣಭೈರೇಗೌಡನ ಕುಟುಂಬದವರು ಈ ಕಾಯಕದಲ್ಲಿ ತಮ್ಮನ್ನು ತೊಡಗಿಸಿ ಕೊಂಡರು. ಅವರು ಹೊಯ್ಸಳರ ರಾಜಕೀಯ ನೀತಿಗಳನ್ನು ತಮಿಳುನಾಡಿನಲ್ಲಿದ್ದಾಗಲೇ ತಿಳಿದಿದ್ದರು ಮತ್ತು ವಿಜಯನಗರ ರಾಜ್ಯದ ರಾಜಧಾನಿ ಹಾಗೂ ಚಿಕ್ಕಬಳ್ಳಾಪುರ ಪರಿಸರಕ್ಕೆ ಸಮೀಪವಿರುವ ಪೆನ್ನುಗೊಂಡ ರಾಜ್ಯದಿಂದ ವಿಜಯನಗರದ ರಾಜನೀತಿಗಳನ್ನು ತಿಳಿದುಕೊಳ್ಳಲು ಸುಲಭವಾಯಿತು.

ಮೂಲತಃ ಅವರ ಪೂರ್ವಜರು ಗಂಗರಾಜದ ಅಧಿಕಾರಿಗಳಾಗಿದ್ದರಿಂದ ಅವರಲ್ಲಿ ಸಹಜವಾಗಿ ಕ್ಷತ್ರಿಯ ಗುಣ ಕಾಣುತ್ತಿತ್ತು. ಆದರೆ ಇಲ್ಲಿನ ಪಾಳೇಯ ಶಕ್ತಿಗಳು ದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಲು ವಿಜಯನಗರ ಅವಕಾಶ ನೀಡುವುದಿಲ್ಲ ಎಂಬುದು ಸೂಕ್ಷ್ಮವಾಗಿ ಗ್ರಹಿಸಿದ ರಣಭೈರೇಗೌಡನ ಸಹೋದರರು ಮತ್ತು ಮಕ್ಕಳು ಆವತಿಯಿಂದ ದೂರ ಹೋಗಿ ಇತರ ಪ್ರದೇಶಗಳಲ್ಲಿ ಪಾಳೇಪಟ್ಟುಗಳನ್ನು ಸ್ಥಾಪಿಸುವ ಗುರಿ ಉದ್ದೇಶಗಳನ್ನು ಹೊಂದಿದ್ದರು. ಅಂತೆಯೇ ರಾಜ್ಯ ಕಟ್ಟಲು ಸೂಕ್ತವಾದ ಸ್ಥಳಗಳನ್ನು ಹುಡುಕಿದರು. ವಿಜಯನಗರದ ಚಕ್ರವರ್ತಿಗಳಿಂದ ಅನುಮತಿಯನ್ನು ಪಡೆದರು. ಹೀಗೆ ರಣಭೈರೇಗೌಡರು ಆವತಿಯಲ್ಲಿ ನೆಲೆಸಿದನು. ಯಲಹಂಕ, ಸೊಗಟೂರು, ಹೊಲವನಹಳ್ಳಿ, ದೇವನಹಳ್ಳಿ, ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರಗಳಲ್ಲಿ ಅವರ ಪಾಳೇಪಟ್ಟುಗಳು ಸ್ಥಾಪನೆಯಾದವು.

ರಣಭೈರೇಗೌಡನ ಸಹೋದರ ತಮ್ಮೇಗೌಡರು 1418ರಲ್ಲಿ ಜಂಗಮಕೋಟೆ ಬಳಿ ಇರುವ ಸೊಗಟೂರಿನಲ್ಲಿ ಕೋಟೆ ಕಟ್ಟಿಸಿ ಅಲ್ಲಿ ತನ್ನ ಪಾಳೇಯ ಪಟ್ಟು ಸ್ಥಾಪಿಸಿ, ಸೊಗಟೂರು ಪ್ರಭು ಎಂದೆ ಹೆಸರಾದನು. ಆದರೆ ಇದು ಬೆಳಕಿಗೆ ಬರುವುದು ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ. ಪೆನುಗೊಂಡ ರಾಜ್ಯವು ಪ್ರಾಮುಖ್ಯತೆಗೆ ಬಂದಾಗ ಆಗ ಇದ್ದ ತಮ್ಮೇಗೌಡನು ಬಿಜಾಪುರ ಸೈನ್ಯವನ್ನು ಎದುರಿಸಿ ಪೆನುಗೊಂಡವನ್ನು ರಕ್ಷಣೆ ಮಾಡಿದಾಗ ಚಕ್ರವರ್ತಿ ವೆಂಕಟಪತಿ ರಾಯ ಇವನಿಗೆ ಚಿಕ್ಕರಾಯ ಎಂಬ ಬಿರುದು ನೀಡಿ ಗೌರವಿಸಿದನು. ಕೋಲಾರ, ಮುಳಬಾಗಿಲು, ವೇಮಗಲ್ಲು, ಬಯಲು ನರಸಾಪುರ, ಸುಗಟೂರು, ಕೈವಾರ, ಬುರುಡಗುಂಟೆ, ಬೂದಿಕೋಟೆ ಮತ್ತು ಪುಂಗನೂರುಗಳು ಇವರ ಆಡಳಿತಕ್ಕೆ ಒಳಪಟ್ಟಿದ್ದವು. ಚಿಕ್ಕರಾಯ ತಮ್ಮೇಗೌಡನ ಕಾಲದಲ್ಲಿ ಹೊಸಕೋಟೆಯು ಅವರ ಎರಡನೇ ಮುಖ್ಯ ಆಡಳಿತ ಕೇಂದ್ರವಾಯಿತು. ಹೀಗೆ ಕ್ರಿ.ಶ 1800 ರವರೆಗೆ ಸುಮಾರು 10 ಪಾಳೇಗಾರರು ಆಡಳಿತ ನಡೆಸಿದರು.

ರಣಭೈರೇಗೌಡನ ಮಗನಾದ ಮಲ್ಲಭೈರೇಗೌಡ ಮತ್ತು ಮೊಮ್ಮಗನಾದ ಮರಿಗೌಡರಿಂದ ಕ್ರಿ.ಶ. 1478ರಲ್ಲಿ ಪ್ರಸ್ತುತ ಇರುವ ಚಿಕ್ಕಬಳ್ಳಾಪುರದ ನಗರ ಕೇಂದ್ರ ಸ್ಥಳದಲ್ಲಿ ಅಂದರೆ ಮೊದಲಿದ್ದ ಕೋಡಿ ಮಂಚನಹಳ್ಳಿ ಗ್ರಾಮದಲ್ಲಿ ಕೋಟೆಯನ್ನು ಕಟ್ಟಿಸಿ, ತನ್ನ ಪಾಳೇಯ ಪಟ್ಟುವನ್ನು ಸ್ಥಾಪಿಸಿದರು. ನಂದಿದುರ್ಗ, ಕಳವಾರದುರ್ಗ, ಗುಡಿಬಂಡೆ, ಇಟ್ಕಲ್ ದುರ್ಗಗಳಲ್ಲಿ ಕೋಟೆಗಳನ್ನು ನಿರ್ಮಿಸುವುದರ ಮೂಲಕ ತಮ್ಮ ಸ್ಥಾನವನ್ನು ಮತ್ತಷ್ಟು ಬಲಿಷ್ಟಗೊಳಿಸಿಕೊಂಡರು. ದೊಡ್ಡಭೈರೇಗೌಡ, ರಂಗಪ್ಪಗೌಡ, ಜೋಗಿಭೈರೇಗೌಡ, ವೆಂಕಟಮ್ಮ, ಹಿಮ್ಮಡಿ ಮರೀಗೌಡ, ಅಣ್ಣೆಗೌಡ, ಹಾವಳಿ ಭೈರೇಗೌಡ, ವೆಂಕಟನಾರಾಯಣ ಗೌಡರವರು ಅನುಕ್ರಮವಾಗಿ ಕ್ರಿ.ಶ. 1791ರವರೆಗೆ ಆಡಳಿತ ಮಾಡಿದ್ದಾರೆ. ಮಾರೇಗೌಡ 1479ರಿಂದ 1502ರ ಕಾಲದಲ್ಲಿ ಗುಮ್ಮನಾಯಕನ ಪಾಳ್ಯ, ಬಾಗೇಪಲ್ಲಿ ತಾಲೂಕು, ಭಾಗಶಃ ಹಿಂದೂಪುರ ತಾಲೂಕುಗಳನ್ನು ಒಳಗೊಂಡಂತೆ ಆಡಳಿತ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ ಗುಮ್ಮನಾಯಕನ ಪಾಳ್ಯದ ಕದಿರಪ್ಪ ನಾಯಕನ ಜೊತೆ

ಶಾಂತಿ ಒಪ್ಪಂದ ಮಾಡಿಕೊಂಡಿರುವುದು ಕಂಡುಬರುತ್ತದೆ. ಕ್ರಿ.ಶ 1687ರಿಂದ 1705ರವರೆಗೆ ಆಳ್ವಿಕೆ ಮಾಡಿದ ಹಿರಿಯ ಅಣ್ಣೇಗೌಡನು ಶಿಡ್ಲಘಟ್ಟವನ್ನು ಖರೀದಿಸಿ ಕೋಟೆ ಕೊತ್ತಲಗಳನ್ನು ನಿರ್ಮಿಸಿದನು. ಹಿಮ್ಮಡಿ ಮರೀಗೌಡನು ಸಾಧನೆ ಮತ್ತು ಇಟ್ಕಲ್ ದುರ್ಗಗಳಿಗೆ ಜಹಾಂಗೀರ್ ಆಗಿದ್ದನು ಬೈಚೇಗೌಡ 1705ರಿಂದ 1725ರವರೆಗೆ ಆಳ್ವಿಕೆ ಮಾಡಿದನು. ಇವನು ಮೈಸೂರು ಒಡೆಯರ ಹಿಮ್ಮಡಿ ಕಂಠೀರವ ನರಸಿಂಹರಾಜರ ದಳವಾಯಿಯ ಸೈನ್ಯವನ್ನು ಕೋತಿಕೊಂಡದ ಬಳಿ ಸೋಲಿಸಿ, ಹಿಮ್ಮಟ್ಟಿಸಿದನು. ನಂತರ ಬುರುಡುಗುಂಟೆ ಪ್ರದೇಶವನ್ನು ಪಡೆದು ತನ್ನ ಆಡಳಿತಕ್ಕೆ ಸೇರಿಸಿಕೊಂಡನು.

ಚಿಕ್ಕಬಳ್ಳಾಪುರದ ಕೋಟೆಯ ನಿರ್ಮಾಣಕಾರನಾದ ಮಲ್ಲಬೈರೇಗೌಡನು ಇಂದಿನ ದೇವನಹಳ್ಳಿಯಿಂದ ದೇವನದೊಡ್ಡಿ ಬಳಿ ಕ್ರಿ.ಶ.1501ರಲ್ಲಿ ಜನಸಾಮಾನ್ಯರ ರಕ್ಷಣೆಗಾಗಿ ಕೋಟೆ ಕಟ್ಟಿದ. ಕೋಟೆಯ ಒಳಭಾಗದಲ್ಲಿ ವೇಣುಗೋಪಾಲಸ್ವಾಮಿ ದೇವಾಲಯವನ್ನು ಸಹ ನಿರ್ಮಿಸಿ ಆ ಪ್ರದೇಶಕ್ಕೆ ದೇವನಹಳ್ಳಿ ಎಂದೇ ಮರುನಾಮಕರಣ ಮಾಡಿದನು. ಸಣ್ಣಭೈರೇಗೌಡ, ಮುದ್ದಭೈರೇಗೌಡ, ಇಮ್ಮಡಿ ಸಣ್ಣಭೈರೇಗೌಡ, ದೊಡ್ಡಭೈರೇಗೌಡ, ಜೋಗಿಭೈರೇಗೌಡ ಹಾವಳಿಭೈರೇಗೌಡ ಆಡಳಿತ ನಡೆಸಿದರು. ದೇವನಹಳ್ಳಿಯ ಮೇಲೆ ಮುತ್ತಿಗೆ ಹಾಕಿದಾಗ ಅಂದು ಚಿಕ್ಕಬಳ್ಳಾಪುರದ ಪಾಳೇಗಾರರಾದ ಚಿಕ್ಕಪ್ಪ ಗೌಡನ ಅಧೀನದಲ್ಲಿತ್ತು. ಹೈದರಾಲಿಗೆ ಮಗ ಟಿಪ್ಪು ಸುಲ್ತಾನ ಜನ್ಮವಾದದ್ದು ಇಲ್ಲಿಯೇ. 1762ರ ವೇಳೆಗೆ ದೇವನಹಳ್ಳಿ ಮೈಸೂರು ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು.

ಮಲ್ಲಭೈರೇಗೌಡನೇ ಕ್ರಿ.ಶ. 1508ರಲ್ಲಿ ದೊಡ್ಡಬಳ್ಳಾಪುರದಲ್ಲಿ ಆದಿನಾರಾಯಣ ದೇವಾಲಯ ಮತ್ತು ಕೋಟೆ–ಕೊತ್ತಲುಗಳನ್ನು ನಿರ್ಮಿಸಿ ತನ್ನ ಪಾಳೇಪಟ್ಟನ್ನು ವಿಸ್ತರಿಸಿಕೊಂಡನು. ನಂತರ ಸುತ್ತಮುತ್ತಲಿನ ಕೃಷಿಕರು, ವ್ಯಾಪಾರಿಗಳು, ಶಿಲ್ಪಿಗಳು, ಕಟ್ಟಡಗಳ ನಿರ್ಮಾಣಕಾರರು, ಕಲಾವಿದರು ಮತ್ತಿತರ ಕುಲಕಸಬುದಾರರಿಗೆ ಇಲ್ಲಿ ಬಂದು ನೆಲೆಸಲು ಆಹ್ವಾನಿಸಿದನು. ಅಲ್ಲದೆ ಹೊರಗಡೆಯಿಂದ ಬಂದ ವಲಸೆಗಾರರಿಗೂ ಹೊಸಪಟ್ಟಣದಲ್ಲಿ ನಿವೇಶನಗಳನ್ನು ನೀಡಲಾಯಿತು. ಅವರವರ ವೃತ್ತಿಗೆ ಅನುಸಾರವಾಗಿ ಪೇಟೆಗಳನ್ನು ನಿರ್ಮಿಸಿ ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟನು.

ದೊಡ್ಡಬಳ್ಳಾಪುರದಲ್ಲಿ ಅವರಿಂದ ಹೆಸರಿಸಲ್ಪಟ್ಟಿದ್ದ ಅನೇಕ ಪೇಟೆ, ಬೀದಿಗಳ ಹೆಸರುಗಳು ಇಂದಿಗೂ ಚಾಲ್ತಿಯಲ್ಲಿವೆ. ಉದಾಹರಣೆಗೆ; ಕುಂಬಾರಪೇಟೆ, ಗಾಣಿಗರ ಪೇಟೆ, ಹಳೆಪೇಟೆ, ಎಲೆಪೇಟೆ, ವಡ್ಡರಪೇಟೆ, ಕಲ್ಲುಪೇಟೆ, ನೇಕಾರರ ಬೀದಿ, ಸುಣಕಲ್ ಬೀದಿ, ಶ್ರೇಣಿಗಳ ಪೇಟೆ, ತಿಗಳರ ಪೇಟೆ, ಆಚಾರ ಬೀದಿ, ಶೆಟ್ಟರ ಬೀದಿ, ಬ್ರಾಹ್ಮಣರ ಬೀದಿ ಹೀಗೆ ಮೊದಲಾದ ಪೇಟೆಗಳು ನಿರ್ಮಾಣವಾದವು. ಇದೇ ಮಾದರಿಯಲ್ಲಿ ಚಿಕ್ಕಬಳ್ಳಾಪುರ, ದೇವನಹಳ್ಳಿ, ಶಿಡ್ಲಘಟ್ಟ, ಚಿಂತಾಮಣಿ ಮೊದಲಾದವು ಪಾಳೇಗಾರರ ಕಾಲದಲ್ಲಿ ನಿರ್ಮಾಣವಾದವು. ಅಲ್ಲದೆ ಈ ಪ್ರದೇಶಗಳಲ್ಲಿ ವಾಣಿಜ್ಯ ವ್ಯವಹಾರಗಳು ಅಭಿವೃದ್ಧಿಯಾಗಿ ಪಾಳೇಗಾರರ ಆಡಳಿತದ ಖಜಾನೆಗೆ ತೆರಿಗೆಯ ಮೂಲಕ ಹೆಚ್ಚು ಆದಾಯ ಬರುವಂತಾಯಿತು. ಅಲ್ಲದೆ ಚಿಕ್ಕಬಳ್ಳಾಪುರದ ಪರಿಸರದಲ್ಲಿ ಗ್ರಾಮೀಣ ಹಾಗೂ ನಗರ ಪಟ್ಟಣದ ಜನರಿಗೆ ಅಗತ್ಯಗಳನ್ನು ಪೂರೈಸುವ ಕೇಂದ್ರಗಳಾದವು. ನಾಗರಿಕತೆಯು ಮುನ್ನಡೆಯಿತು. ಗುಮ್ಮನಾಯಕನ ಪಾಳ್ಯದ ಚಿನ್ನಮ್ಮನಾಯಕನು ದೇವರಾಜಪಲ್ಲಿಯ ಬಳಿಯಿದ್ದ ಕಾಡನ್ನು ಕತ್ತರಿಸಿ ಹಲವು ಹಳ್ಳಿಗಳನ್ನು ನಿರ್ಮಿಸಿದನು. ರಾಜಧಾನಿ ಗುಮ್ಮನಾಯಕನ ಪಾಳ್ಯದ ನಿರ್ಮಾಣಕ್ಕೆ ಬೇಕಾದಂತಹ ಅವಶ್ಯಕ, ಅತ್ಯಗತ್ಯಗಳನ್ನು ಪೂರೈಸುವಲ್ಲಿ ಶ್ರಮಿಸಿದನು. ಈ ರಾಜಧಾನಿಗೆ

ರೈತರು, ವ್ಯಾಪಾರಸ್ಥರು, ಕುಶಲ ಕಲೆಗಾರರು ಹಾಗೂ ಇತರೆ ಕುಲಕಸುಬುದಾರರನ್ನು ಕರೆಸಿ ಅವರ ಕುಲಕಸುಬುಗಳನ್ನು ಆಧರಿಸಿದ ವೃತ್ತಿಗಳಿಗೆ ಅನುಕೂಲ ಮಾಡಿಕೊಟ್ಟನು. ಆಡಳಿತದ ಸುಗಮ ಕಾರ್ಯಾಚರಣೆಗಾಗಿ ಅರಮನೆಯಲ್ಲಿ ಹಲವಾರು ಇಲಾಖೆಯನ್ನು ಸ್ಥಾಪಿಸಿದನು. ಅಶ್ವಶಾಲೆ, ಗಜಶಾಲೆ, ಬೊಕ್ಕಸ, ಉಗ್ರಾಣ ಮೊದಲಾದವುಗಳನ್ನು ಕಟ್ಟಿಸಿದನು. ಸಂಧಾನದವರು, ಗುರಿಕಾರರು, ಓಲೆಕಾರರು, ಹೊಗಳು ಭಟ್ಟರು ಮತ್ತು ಪ್ರತಿ ಗ್ರಾಮಗಳಿಗೆ ಅಗತ್ಯವಾದ ಶಾನುಭೋಗ, ತೊಟಿ, ತಳವಾರ ಮೊದಲಾದ ಪರಿವಾರದವರನ್ನು ನೇಮಿಸಿದನು. ಕೆಲವರಿಗೆ ನಗದು ಸಂಬಳ, ಮತ್ತೆ ಕೆಲವರಿಗೆ ಇನಾಹಿತಿ, ಕೆಲವರಿಗೆ ಗ್ರಾಮ ಪ್ರಜೆಗಳಿಂದ ಹಣ ಸಂದಾಯ ಆಗುವಂತೆ ಏರ್ಪಡಿಸಿದ್ದನು. ಇದರಿಂದ ಗ್ರಾಮಗಳ ರಚನೆ ಹಾಗೂ ಸ್ಥಳೀಯರಿಂದಲೇ ರಾಜಕೀಯ ಆಡಳಿತ ಹೇಗೆ ರಚನೆಯಾಯಿತು ಎಂಬುದರ ಚಿತ್ರಣವನ್ನು ತಿಳಿಯಬಹುದು.

**ಉಪಸಂಹಾರ**

ಕರ್ನಾಟಕವನ್ನು ಆಳ್ವಿಕೆ ಮಾಡಿದ ಹಲವಾರು ರಾಜ ಮಹಾರಾಜರ ನಡುವೆ ಕನ್ನಡ ನಾಡಿನ ಇತರೆ ಜಿಲ್ಲಾ ಪ್ರದೇಶಗಳಿಗಿಂತ ಚಿಕ್ಕಬಳ್ಳಾಪುರದ ಸುತ್ತಮುತ್ತಲು ಹೆಚ್ಚು ಪಾಳೇಯ ಪಟ್ಟುಗಳು ಅಸ್ತಿತ್ವಕ್ಕೆ ಬಂದಿದ್ದವು. ಚಿಕ್ಕಬಳ್ಳಾಪುರ ದಕ್ಷಿಣ ಭಾರತದಲ್ಲಿ, ಭೌಗೋಳಿಕವಾಗಿ ಹೃದಯ ಭಾಗದಲ್ಲಿ ಹಾಗೂ ಸಮೃದ್ಧವಾಗಿರುವುದೇ ಇದಕ್ಕೆ ಕಾರಣವಾಗಿದೆ. ಹೈದರಾಬಾದ್ ನಿಂದ ಬೆಂಗಳೂರಿನವರೆಗೆ ರಾಷ್ಟ್ರೀಯ ಹೆದ್ದಾರಿ 7 ಮತ್ತು ಮಂಗಳೂರಿನಿಂದ ಮದ್ರಾಸ್‌ವರೆಗೆ ರಾಷ್ಟ್ರೀಯ ಹೆದ್ದಾರಿ 234 ಇವು ಚಿಕ್ಕಬಳ್ಳಾಪುರ ನಗರದ ಹೃದಯ ಭಾಗದಲ್ಲಿ ಹಾದು ಹೋಗುತ್ತವೆ. ಅಲ್ಲದೆ ಸುತ್ತಲೂ ಪ್ರಸಿದ್ಧ ವಾಣಿಜ್ಯ ನಗರಗಳ ನಿಕಟ ಸಂಪರ್ಕ ನಗರಕ್ಕಿದೆ. ನಂದಿಗಿರಿ ಶ್ರೇಣಿಗಳು ಈ ಪ್ರದೇಶಕ್ಕೆ ಉತ್ತಮ ಮಳೆ, ಉತ್ತಮ ಹವಾಗುಣವನ್ನು ಉಂಟು ಮಾಡಿವೆ. ವಿಭಿನ್ನ ಜನಸಮುದಾಯ, ಸಂಸ್ಕೃತಿಗಳು, ಧರ್ಮ, ಫಲವತ್ತಾದ ಭೂಮಿ ಸಾಧ್ಯವಾದಷ್ಟು ಕೃಷಿಗೆ ನಿರೋದಗಿಸುವ ನದಿಯ ತೊರೆಗಳು ಇಲ್ಲಿವೆ. ಹೀಗಾಗಿ ಸಾಮಾನ್ಯವಾಗಿ ಪಾಳೇಪಟ್ಟುಗಳು ನಿರ್ಮಾಣವಾಗುವುದಕ್ಕೆ ಮೂಲ ಕಾರಣವಾಗಿವೆ. ಈ ಮೂಲಕ ಚಿಕ್ಕಬಳ್ಳಾಪುರದ ಪಾಳೇಪಟ್ಟುಗಳ ಒಂದು ಹಿಣುಕು ನೋಟವನ್ನು ನೋಡುವಂತಾಯಿತು.

**ಪರಾಮರ್ಶನ ಗ್ರಂಥಗಳು**


- ಆನಂದ ಕುಮಾರ. ಜಿ. (2017). ಚಿಕ್ಕಬಳ್ಳಾಪುರದ ಜಿಲ್ಲಾ ಅಂಕಿ ಅಂಶಗಳ ನೋಟ (2015–16), ಜಿಲ್ಲಾ ಸಾಂಖ್ಯಿಕ ಇಲಾಖೆ, ಚಿಕ್ಕಬಳ್ಳಾಪುರ.
- ಬೆಟ್ಟಸಂದ್ರಗುರುಸಿದ್ದಯ್ಯ. ಬಿ.ಟಿ. (2015). ದೇವನದೊಡ್ಡಿಯಿಂದ ದೇವನಹಳ್ಳಿಯವರಿಗೆ ಹೆಜ್ಜೆಗುರುತು, ಸ್ವಾತಿ ಪ್ರಕಾಶನ, ದೇವನಹಳ್ಳಿ.
- ದೀಪ್ತಿ ಆಧಿತ್ಯ ಕಾನಡೆ. (2014). ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರವಾಸಿ ತಾಣಗಳು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ, ಚಿಕ್ಕಬಳ್ಳಾಪುರ.
- ಗೋಪಾಲ್ ಆರ್. (2004). ಕೋಲಾರ ಜಿಲ್ಲೆಯ ಹಿತಿಹಾಸ ಮತ್ತು ಪುರತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

- ಕೋಡಿರಂಗಪ್ಪ. (2018). ಚಿಕ್ಕಬಳ್ಳಾಪುರದ ಜಿಲ್ಲಾ ದಶಮಾನೋತ್ಸವ ಸ್ಮರಣ ಸಂಚಿಕೆ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ.
- ನಾಗರಾಜ. ಎಂ. ಹೆಚ್. (1986). ಮೊರಸು ವಕ್ಕಲಿಗರು–ಒಂದು ಸಾಂಸ್ಕೃತಿಕ ಅಧ್ಯಯನ, ಧಾರವಾಡ.
- ಶಂಕರನಾರಾಯಣರಾವ್. ಎನ್. ಪಿ. (2007). ಆವತಿ ನಾಡಪಭ್ರುಗಳು, ಸಪ್ನ ಬುಕ್‌ಹೌಸ್, ಬೆಂಗಳೂರು.
- ವೆಂಕಟೇಶ್ ಎಸ್. (2016). ದೊಡ್ಡಬಳ್ಳಾಪುರದ ಚಾರಿತ್ರಿಕ ಅಧ್ಯಯನ, ದೃಶ್ಯ ಪ್ರಕಾಶನ, ದೊಡ್ಡಬಳ್ಳಾಪುರ.